# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 1063/2016 ಸಿಡಬ್ಲೂ : 8 ಪಿಡಬ್ಲೂಃ 4

ಪ್ರಮಾಣವಚನ ಬೋಧಿಸಲಾಯಿತು ದಿಃ 06-03-2026

ಹೆಸರು : ಸಂತೋಷ್ ರಾಥೋಡ್

ತಂದೆ ಹೆಸರು : ಶಂಕರ್ ರಾಥೋಡ್

ವಯಸ್ಸು : 41 ವರ್ಷ

ಉದ್ಯೋಗ : ಪಿ ಐ ಲೋಕಾಯುಕ್ತ ಬೀದರ್

ವಾಸಸ್ಥಳ : ಬೀದರ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 13-06-2016 ರಿಂದ 19-02-2017 ವರೆಗೆ ಸೇಡಂ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿಃ 29-06-2016 ರಂದು ಚಾ ಸಾ 7 ರವರಿಂದ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲಿಸಲಾಗಿ, ದಿ.30-06-2016 ರಂದು ಆರ್ ಎಫ್ ಎಸ್ ಎಲ್ ನಾಗನಳ್ಳಿಯಿಂದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ ಪಿ 3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಪ್ರ ವ ವರದಿಯ ಮೇಲೆ ಇರುವ ಚಾ ಸಾ 7 ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 4 ಹಾಗೂ ಚಾ ಸಾ 7 ರವರ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ಅದೇ ರೀತಿ ನಿ ಪಿ 2 ರ ಮೇಲೆ ಇರುವ ಚಾ ಸಾ 7 ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಅಬಕಾರಿ ನಿರೀಕ್ಷಕರು ವಲಯ ಸೇಡಂ ರವರಿಗೆ ಪ್ರಕರಣದಲ್ಲಿ ಜಪ್ತಿ ಮಾಡಿದ ಮು ಮಾ ನ್ನು ವರ್ಗಾವಣೆ ಮಾಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣ ಗೊಂಡಿರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದ ಃ

ದಿಃ 29-06-2016 ರಂದು ಚಾ ಸಾ 7 ರವರಿಂದ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲಿಸಲಾಗಿ, ದಿ.30-06-2016 ರಂದು ಆರ್ ಎಫ್ ಎಸ್ ಎಲ್ ನಾಗನಳ್ಳಿಯಿಂದ ರಾಸಾಯನಿಕ

ವಿಶ್ಲೇಷಣಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅದೇ ದಿನ ಅಬಕಾರಿ ನಿರೀಕ್ಷಕರು ವಲಯ ಸೇಡಂ ರವರಿಗೆ ಪ್ರಕರಣದಲ್ಲಿ ಜಪ್ತಿ ಮಾಡಿದ ಮು ಮಾ ನ್ನು ವರ್ಗಾವಣೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ದಿನ ತನಿಖೆ ಪೂರ್ಣ ಗೊಂಡಿರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ ದಂ. ಸೇಡಂ.**